# ಇಸ್ರೋದಲ್ಲಿ ಒಂದು ದಿನ



'ಪುಸ್ತಕ ಕೊಟ್ಟಿದ್ದರಿಂದ ನಿಮಗೆ ಬಹಳ ಸಂತೋಷವಾಗಿದೆಯಲ್ಲವೇ? ಆದರೆ ಈ ಪ್ಯಾಕ್ ಮಾಡಿದ ಬಹುಮಾನ ನೋಡಿದಾಗ ನಿಮಗೆ ಮತ್ತಷ್ಟು ಸಂತೋಷವಾಗುತ್ತದೆ' ಎಂದು ಇಸ್ರೋ ಅಧಿಕಾರಿಗಳು ನಗುತ್ತಾ ಬಹುಮಾನ ಕೊಟ್ಟರು. ಮನೆಗೆ ಬಂದು ಪ್ಯಾಕ್ ಅನ್ನು ನಿಧಾನವಾಗಿ ಬಿಚ್ಚಿದೆ. ಅಬ್ಬಾ! ಜಿಎಸ್‌ಎಲ್‌ವಿಯ ಪುಟ್ಟ ಪ್ರತಿರೂಪ ಕಂಡು ತುಂಬಾ ಸಂತೋಷವಾಯಿತು.

■ **ಶೋಭಾ ಅರಸ**

ಬಾಲ್ಯದಲ್ಲಿ ವಿಜ್ಞಾನಿಯಾಗಬೇಕೆಂಬ ಬಯಕೆಯಿದ್ದರೂ ಶಾಲಾ ಪ್ರಯೋಗಾಲಯದಲ್ಲಿರುವ ರಾಸಾಯನಿಕ ವಸ್ತುಗಳ ವಾಸನೆ ನನಗೆ ಸಹ್ಯವಾಗದೆ ತಲೆನೋವು ಬರುತ್ತಿದ್ದುದರಿಂದ ವಾಣಿಜ್ಯ ವಿಷಯವನ್ನು ಓದಿ ಪದವಿ ಪಡೆದುಕೊಂಡೆ. ಆದರೂ ವಿಜ್ಞಾನದ ಪುಸ್ತಕಗಳನ್ನು ಓದುವ ಹವ್ಯಾಸ ಬಿಟ್ಟಿರಲಿಲ್ಲ. ನಿರಂತರ ರೇಡಿಯೊ ಕೇಳುಗಳಾಗಿದ್ದ ನಾನು ಆಕಾಶವಾಣಿಯಲ್ಲಿ ಬರುವ ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳ ಕಾರ್ಯಕ್ರಮಗಳನ್ನು ಆಸಕ್ತಿಯಿಂದ ಕೇಳುತ್ತಿದ್ದೆ. 2017ರ ಜುಲೈನಲ್ಲಿ ಬೆಂಗಳೂರು ಆಕಾಶವಾಣಿಯವರು 'ನಭೋಯಾನ' ಎಂಬ ಕಾರ್ಯಕ್ರಮ ವನ್ನು ವಾರಕ್ಕೊಮ್ಮೆ ಬೆಳಿಗ್ಗೆ ಪ್ರಸಾರ ಮಾಡುತ್ತಿದ್ದರು. ಇದು ಕರ್ನಾಟಕದ ಎಲ್ಲಾ ಬಾನುಲಿ ಕೇಂದ್ರಗಳಿಂದ ಏಕಕಾಲಕ್ಕೆ ಪ್ರಸಾರವಾಗುತ್ತಿತ್ತು ಪ್ರತಿ ಕಂತಿನ ಕೊನೆಯಲ್ಲಿ ಪ್ರಶ್ನೆ ಕೇಳುತ್ತಿದ್ದರು. ಅದಕ್ಕೆ ಸರಿಯುತ್ತರ ಕಳಿಸಿದವರಿಗೆ ಇಸ್ರೋದವರಿಂದ ಬಹುಮಾನವಿದೆಯೆಂದು ಹೇಳಿದ್ದರು.

ನಾನು ಪ್ರತಿವಾರವೂ ಬಿಡದೆ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಕೇಳಿ ಪ್ರಶ್ನೆಗೆ ಉತ್ತರವನ್ನು ಕೂಡಲೆ ಅಂಚೆ ಕಾರ್ಡನಲ್ಲಿ ಬರೆದು ಕಳುಹಿಸುತ್ತಿದ್ದೆ. ಕಾರ್ಯಕ್ರಮದಲ್ಲಿ ಚರ್ಚಿಸಿದ ವಿಷಯಗಳನ್ನು ಬರೆದಿಟ್ಟುಕೊಳ್ಳುತ್ತಿದ್ದೆ. ಈ ಕಾರ್ಯಕ್ರಮದಲ್ಲಿ ಅಂತರಿಕ್ಷ, ಕೃತಕ ಉಪಗ್ರಹ ಇತ್ಯಾದಿಗಳ ಬಗ್ಗೆ ನುರಿತ ತಜ್ಞರು ಮಾಹಿತಿ ನೀಡುತ್ತಿದ್ದರು. ಹೀಗೆ 13 ಕಂತುಗಳ ನಂತರ ಸರಿಯುತ್ತರ ಬರೆದ ಎಲ್ಲರ ಪತ್ರಗಳನ್ನು ರಾಶಿ ಹಾಕಿ ಒಟ್ಟು 13 ಪತ್ರಗಳನ್ನು ಹೆಕ್ಕಿತೆಗೆದು ವಿಜೇತರೆಂದು ಘೋಷಿಸುವುದಾಗಿತ್ತು. ನಾನು ಎಲ್ಲಾ 13 ಪ್ರಶ್ನೆಗಳಿಗೂ ಸರಿಯುತ್ತರ ಬರೆದಿದ್ದರಿಂದ ನನ್ನ ಹೆಸರನ್ನು ಘೋಷಿಸಬಹುದು ಅಂತ ರೇಡಿಯೊ ಮುಂದೆ ಕಾದು ಕುಳಿತಾಗ 10ನೆಯ ಹೆಸರು ನನ್ನದಾಯಿತು. ಬಹಳ ಸಂತೋಷವಾಯಿತು.

ಆದರೆ ತಿಂಗಳುಗಳು ಉರುಳಿದರೂ ಬಹುಮಾನದ ಬಗ್ಗೆ ಮಾಹಿತಿ ಬರಲೇ ಇಲ್ಲ. ನಾನು ಬೆಂಗಳೂರು ಆಕಾಶವಾಣಿಗೆ ಫೋನ್ ಮಾಡಿದೆ. 'ನಿಮಗೆ ಬಹುಮಾನವನ್ನು ಇಸ್ರೋದವರು ನಿಮ್ಮನ್ನು ಅವರ ಸಂಸ್ಥೆಗೇ ಕರಿಸಿ ಕೊಡುತ್ತಾರೆ ಅದರ ಬಗ್ಗೆ ಶೀಘ್ರದಲ್ಲಿ ಪತ್ರಬರುತ್ತದೆ' ಎಂದು ಹೇಳಿದರು. ಕೊನೆಗೂ 2008 ಮಾರ್ಚ್ 12ರಂದು ಇಸ್ರೋ ಆವರಣದಲ್ಲಿ ಬಹುಮಾನ ನೀಡುತ್ತೇವೆ ಎಂದು ಮಾರ್ಚ್ 7ರಂದು ಪತ್ರ ಬಂದಿತು. ಬೆಂಗಳೂರಿಗೆ ಹೋಗಿ ಬರುವ ವೆಚ್ಚವನ್ನು ಆಕಾಶವಾಣಿಯವರೇ ಬರಿಸುತ್ತೇವೆ ಎಂದು ತಿಳಿಸಿದ್ದರಿಂದ ನಮ್ಮೂರಿನಿಂದ ರಾತ್ರಿ ಬಸ್‌ನಲ್ಲಿ ಬೆಂಗಳೂರಿಗೆ ಹೋದೆ. ಬೆಳಿಗ್ಗೆ 9ಕ್ಕೆ ಸರಿಯಾಗಿ ಕರ್ನಾಟಕದ ವಿವಿಧ ಭಾಗಗಳಿಂದ ಬಂದ ವಿಜೇತರೆಲ್ಲರೂ ಆಕಾಶವಾಣಿ ಆವರಣದಲ್ಲಿ ಸೇರಿದ್ದೆವು.

ಪರಸ್ಪರ ಪರಿಚಯವಾದ ನಂತರ ಸುಮಂಗಲಾ ಮುಮ್ಮಿಗಟ್ಟಿಯವರು ಮಿನಿ ಬಸ್ಸಿನಲ್ಲಿ ನಮ್ಮನ್ನು ಇಸ್ರೋ ಸಂಸ್ಥೆಗೆ ಕರೆದುಕೊಂಡು ಹೋದರು. ನಮ್ಮೆಲ್ಲರನ್ನೂ ಕೂಲಂಕುಶವಾಗಿ ತಪಾಸಣೆ ಮಾಡಿದ ನಂತರ ಇಸ್ರೋ ಸಂಸ್ಥೆಯವರು ಆತ್ಮೀಯವಾಗಿ ನಮ್ಮನ್ನು ಸ್ವಾಗತಿಸಿದರು. ಆಗ ಅಲ್ಲಿ 'ಚಂದ್ರಯಾನ'ದ ತಯಾರಿ ನಡೆಯುತ್ತಿತ್ತು. ಸೆಕ್ಯುರಿಟಿ ಬಹಳ ಬಿಗಿಯಾಗಿತ್ತು. ಆರ್ಯಭಟ ಇತ್ಯಾದಿ ಉಪಗ್ರಹಗಳ ಮಾದರಿಗಳನ್ನು, ಇಸ್ರೋದ ಬೇರೆ ಬೇರೆ ವಿಭಾಗಗಳನ್ನು, ಚಂದ್ರಯಾನದ ತಯಾರಿಕೆಯನ್ನು ವಿಜ್ಞಾನಿಗಳು ತೋರಿಸುವ ಸಮಯದಲ್ಲಿ ಒಬ್ಬ ಗನ್‌ಮ್ಯಾನ್ ಕೂಡ ನಮ್ಮೊಂದಿಗಿದ್ದರು. ಮಧ್ಯಾಹ್ನ ಅಲ್ಲಿಯೇ ನಮಗೆ ರುಚಿಕರವಾದ ಭೋಜನವನ್ನು ಒದಗಿಸಿದ್ದರು. ಆನಂತರ ಇಸ್ರೋ ಸಂಸ್ಥೆಯ ಸಾಧನೆಗಳ ಬಗ್ಗೆ ಒಂದು ಕಿರು ಸಾಕ್ಷ್ಯಚಿತ್ರವನ್ನು ತೋರಿಸಿದರು. ಸಂಜೆ ಚಹಾ ಸಮಯದಲ್ಲಿ ನಮ್ಮೆಲ್ಲರ ಅನಿಸಿಕೆಗಳನ್ನು ಕೇಳಿದರು. ನಾನು 'ನಭೋಯಾನ' ಸರಣಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಇಸ್ರೋ ಬಗ್ಗೆ ಮಾಹಿತಿ ಇರುವ ಪುಸ್ತಕಗಳನ್ನು ಕೊಟ್ಟರೆ ಮತ್ತಷ್ಟು ಸಂತೋಷವಾಗುತ್ತದೆ' ಎಂದು ಹೇಳಿದೆ.

ಕೂಡಲೆ ನಮಗೆಲ್ಲರಿಗೂ ಇಸ್ರೋ ಲಾಂಛನವಿರುವ ಪೇಪರ್ ಬ್ಯಾಗ್‌ನಲ್ಲಿ ನಿವೃತ್ತ ಐ.ಎ.ಎಸ್ ಆಫೀಸರ್ ಎಸ್.ಕೆ. ದಾಸ್ ಬರೆದ 'ಟಚ್ಚಿಂಗ್ ಲೈವ್ಸ್' ಪುಸ್ತಕವನ್ನು ಹಾಕಿ ಕೊಟ್ಟರು. ಆನಂತರ ಬಹುಮಾನ ವಿತರಣೆ ಕಾರ್ಯಕ್ರಮ. ಒಬ್ಬೊಬ್ಬರ ಹೆಸರನ್ನು ಕರೆದು ನಮ್ಮ ಕಿರು ಪರಿಚಯವನ್ನು ಹೇಳಿ ಸುಂದರವಾಗಿ ಪ್ಯಾಕ್ ಮಾಡಿದ ಡಬ್ಬಿಕೊಟ್ಟರು. ದೂರದೂರಿಗೆ ಹೋಗುವವರು ಪ್ಯಾಕ್ ಬಿಚ್ಚದೆ ಅದನ್ನು ಹಾಗೇ ತೆಗೆದುಕೊಂಡು ಹೋಗಿ ಎಂದರು. ನನಗೆ ಕೊಡುವಾಗ 'ಪುಸ್ತಕ ಕೊಟ್ಟಿದ್ದರಿಂದ ನಿಮಗೆ ಬಹಳ ಸಂತೋಷವಾಗಿದೆಯಲ್ಲವೇ? ಆದರೆ ಇದನ್ನು ನೋಡಿದಾಗ ನಿಮಗೆ ಮತ್ತಷ್ಟು ಸಂತೋಷವಾಗುತ್ತದೆ; ಫೋಟೋ ತೆಗೆಯುತ್ತಿದ್ದಾರೆ ನಿಮ್ಮ ಸಂತೋಷವನ್ನು ಈಗ ವ್ಯಕ್ತಪಡಿಸಿ' ಎಂದು ನಗುತ್ತಾ ಬಹುಮಾನ ಕೊಟ್ಟರು. ಮನೆಗೆ ಬಂದು ಪ್ಯಾಕ್ ಅನ್ನು ನಿಧಾನವಾಗಿ ಬಿಚ್ಚಿದೆ. ಅಬ್ಬಾ! ಜಿ.ಎಸ್.ಎಲ್.ವಿ.ಯ ಪುಟ್ಟ ಪ್ರತಿರೂಪ ಕಂಡು ತುಂಬಾ ಸಂತೋಷವಾಯಿತು. ನಮ್ಮ ಊರಿಗೆ ತಲುಪಿದ ಕೆಲವೇ ದಿನಗಳಲ್ಲಿ ಈ ಛಾಯಾಚಿತ್ರವು ಸುಭದ್ರವಾಗಿ ಪ್ಯಾಕ್ ಮಾಡಿದ ಕವರ್‌ನಲ್ಲಿ ಅಂಚೆ ಮೂಲಕ ತಲುಪಿತು.

ಒಟ್ಟಿನಲ್ಲಿ ವಿಜ್ಞಾನಿಯಾಗದಿದ್ದರೂ ಇಸ್ರೋದಲ್ಲಿ ಒಂದು ದಿನವಿಡೀ ವಿಜ್ಞಾನಿಗಳೊಡನಿದ್ದು ಅವರ ಆದರದ ಆತಿಥ್ಯವನ್ನು ಸ್ವೀಕರಿಸಿದ್ದು ನನಗೆ ಎಂದಿಗೂ ಮರೆಯಲಾಗದ ಸವಿನೆನಪು. ಇಂತಹ ಸವಿನೆನಪು ನೀಡಿದ ಆಕಾಶವಾಣಿ ನನಗೆಂದಿಗೂ ಆತ್ಮೀಯ ಸಂಗಾತಿ! ■